ಪೈಪ್‌ಲೈನ್‌ನ ಶಿಥಿಲಾವಸ್ಥೆ

2300 (1448); ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ)

ಅ) ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ನಗರ ಪ್ರದೇಶದಲ್ಲಿರುವ ಪೈಪ್‌ಲೈನ್ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕುಡಿಯುವ ನೀರಿನ ಪೈಪುಗಳ ಬದಲಾವಣೆ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಇದಕ್ಕಾಗಿ ಅಂದಾಜಿಸಲಾದ ಮೊತ್ತವೆಷ್ಟು ಮತ್ತು ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಈ) ಈಗಾಗಲೇ ಶಿಥಿಲಾವಸ್ಥೆಯಲ್ಲಿರುವ ಪೈಪ್‌ಲೈನ್ ಬದಲಾವಣೆಗೆ ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು (ವಿವರ ನೀಡುವುದು)?

ಶ್ರೀ ವಿನಯ ಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ. ಆದರೆ 2012–13 ನೇ ಸಾಲಿನ 13ನೇ ಹಣಕಾಸು ಮೂಲ ಅನುದಾನದಲ್ಲಿ ಅಂದಾಜು ವೆಚ್ಚ ₹ 13.84 ಲಕ್ಷ ನೇದ್ದರಲ್ಲಿ ಅಥಣಿ ಪಟ್ಟಣಕ್ಕೆ ಕೃಷ್ಣಾ ನದಿಯಿಂದ ನೀರು ಸರಬರಾಜು ಮಾಡುವ ಮುಖ್ಯ 10" ಡಿ.ಆಯ್. ಪೈಪ್ ಲೈನ್ ಬದಲಾವಣೆ ಮಾಡುವುದು 1) ಕರ್ಲಟಿ ಗ್ರಾಮದ ಶ್ರೀ ಮೊಕಾಶಿ ಹೊಲದ ಹತ್ತಿರ 2) ಕೃಷ್ಣಾ ಶುಗರ್ ಫ್ಯಾಕ್ಟರಿ ಜಕನೂರ ಹೊಲದ ಹತ್ತಿರ 3) ಸಂಕೋನಟ್ಟಿ ಎಸ್‌ಟಿಎಂಸಿ ಟ್ರ್ಯಾಕ್ಟರ್ ಗ್ಯಾರೇಜರ ಹತ್ತಿರದ ಪೈಪ್ ಲೈನ್ ಗಳನ್ನು ಬದಲಾವಣೆ ಮಾಡಿ ಕಾಮಗಾರಿಯನ್ನು ದಿನಾಂಕ: 09.04.2013 ಪೂರ್ಣಗೊಳಿಸಲಾಗಿದೆ.

ಈ) ಅನ್ವಯವಾಗುವುದಿಲ್ಲ.